**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 952/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಸೋಮಶೇಕರಯ್ಯ ಹಿರೇಮಠ್ | ಪ್ರಾಸಾಃ 1 |
| ತಂದೆಯ/ಗಂಡನ ಹೆಸರು | | ಸಂಗಯ್ಯ | ಚಾಸಾಃ 1 |
| ವಯಸ್ಸು | | 38 | |
| ಕೆಲಸ | | ಕೆ.ಎಸ್.ಆರ್.ಟಿ.ಸಿ ನಂಜನಗೂಡು ಡಿಪೋ | ಸಾ ಪ್ರ ಬೋ |
| ವಾಸ | | ನಂಜನಗೂಡು | ದಿಃ 24/05/2019 |

ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ

ನ್ಯಾಯಾಲಯದ ಮುಂದಿರುವ ಆರೋಪಿಗಳು ನನಗೆ ಗೊತ್ತು. ಚಾಸಾ-1 ರಿಂದ 5 ನನಗೆ ಗೊತ್ತು. ನಾನು ನಂಜನಗೂಡಿನ ಡಿಪೋ ವ್ಯಾಪಿಗೆ ಸೇರಿದ ಕೆ.ಎಸ್.ಜಆರ್.ಟಿ.ಸಿ ಯಲ್ಲಿ ಕಂಡ್ಕಟರ್ ಆಗಿ 2010 ರಿಂದ ಇಲ್ಲಿಯವರೆಗೆ ಕರ್ಯಾ ನಿರ್ವಹಿಸುತ್ತಿದ್ದೇನೆ. ಹೀಗೆ 5 ವರ್ಷಗಳ ಹಿಂದೆ ಕೆ.ಎ.09 ಎಫ್ 3955 ನನ್ನನ್ನು ಕಂಡ್ಕಟರ್ ಆಗಿ ನೇಮಕ ಮಾಡಿದ್ದರು. ಬೆಳಗ್ಗೆ 9.15 ಗಂಟೆಗೆ ನಾನು ನಂಜನಗೂಡಿನ ಕೆ.ಎಸ್.ಆರ್.ಟಿ.ಸಿ ಬಸ್ ಸ್ಟಾಂಡಿನಿಂದ ಹೆಮ್ಮರಗಾಲ ಗ್ರಾಮಕ್ಕೆ ಹೋಗಿ ವಾಪಸ್ಸು ನಂಜನಗೂಡಿಗೆ 9.40 ಕ್ಕೆ ಹೆಮ್ಮರಗಾಲ ಬಿಟ್ಟೆವು. ವಾಪಸ್ಸು ಆಗುವ ಸಮಯದಲ್ಲಿ ಚೆಲ್ಲರೆ ವಿಚಾರಕ್ಕೆ ಒಂದನೇ ಆರೋಪಿ ಇಬ್ಬರಿಗೂ ಸೇರಿಸಿ ಚೆಲ್ಲರೆ ಕೊಡಬೇಡಿ, ನನಗೆ ಒಬ್ಬನಿಗೆ ನನ್ನ ಚಿಲ್ಲರೆ ವಾಪಸ್ಸು ಕೊಡಿ ಎಂದು ಕೇಳಿದರು. ಆಗ ಒಂದನೇ ಆರೋಪಿ ಅವ್ಯಾಚ್ಯ ಶಬ್ದಗಳಿಂದ ಬೋಳಿಮಗನೇ, ಊರಿಗೆ ಬಾ ನೋಡಿಕೊಳ್ಳುತ್ತೇನೆ ಎಂದು ಬೈಯುತ್ತಾ ಹೋದರು. ಮತ್ತೆ 3.15 ಗಂಟೆಗೆ ನಾನು ನಂಜನಗೂಡು ಕೆ.ಎಸ್.ಜಆರ್.ಟಿ.ಸಿ ಬಸ್ ಸ್ಟಾಂಡ್ ಬಿಟ್ಟೆವು. ಹೆಮ್ಮರಗಾಲಕ್ಕೆ 4.00 ಗಂಟೆಗೆ ತಲುಪಿದೆವು ಮತ್ತೆ ಅಲ್ಲಿಂದ ವಾಪಸ್ಸು ಬರುವಾಗ ಮಾರ್ಗ ಮಧ್ಯದಲ್ಲಿ ಹೆಡತಲೆ ಗ್ರಾಮದಲ್ಲಿ ನಾಲ್ಕು ಜನ ಬಸ್ ಹತ್ತಿದರು. ಒಂದನೇ ಆರೋಪಿ 10 ರೂಪಾಯಿ ಕೊಟ್ಟು ನಂಜನಗೂಡಿಗೆ 15 ರೂಪಾಯಿಯ ಟಿಕೆಟ್ ಕೊಡು ಎಂದು ಜಗಳ ಮಾಡಿದ. ಆಗ ಎರಡನೇ ಆರೋಪಿಯು ಹಿಂದಗಡೆಯಿಂದ ಬಂದು ಎರಡು ಏಟು ಹೊಡೆದು ಅವ್ಯಾಚ್ಯ ಶಬ್ದಗಳಿಂದ ಬೋಳಿ ಮಗನೇ, ಸೂಳೆ ಮಗನೇ ಎಂದು ಬೈದನು. ಇ.ಟಿ.ಎಂ ಮಷಿನ್ ಅನ್ನು ನನ್ನಿಂದ ಎರಡನೇ ಆರೋಪಿ ಕಿತ್ತುಕೊಂಡು ಹೊಡೆದು ಹಾಕಿದನು. ನನ್ನ ಸರ್ಕಾರಿ ಕರ್ತವ್ಯವನ್ನು ನಿರ್ವಹಿಸಲು ಅಡ್ಡಿಪಡಿಸಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ದೂರಾಗಿದ್ದು ಅದನ್ನು ಈಗ ನಿಪಿ-1 ಎಂದು ಅದರಲ್ಲಿರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ನ್ನು ಕೊಟ್ಟ ನಂತರ ದಿನಾಂಕ 20.05.2014 ರಂದು ಹೆಡತಲೆ-ಬದನವಾಳು ರಸ್ತೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಯ ಬಳಿ ಸ್ಥಳ ಪೋಲಿಸರು ಮಹಜರ್ ಕ್ರಮ ಜರುಗಿಸಿರುತ್ತಾರೆ. ಘಟನಾ ಸ್ಥಳವನ್ನು ಪೋಲಿಸರಿಗೆ ನಾನೇ ತೋರಿಸಿರುತ್ತೇನೆ. ಆಗ ಪೋಲಿಸರು ಇ.ಟಿ.ಎಂ ಮಷಿನ್ ಅನ್ನು ನನ್ನಿಂದ ವಶಪಡಿಸಿಕೊಂಡರು. ಈಗ ಸಾಕ್ಷಿಗೆ ಮಹಜರ್ ದಾಖಲೆಯನ್ನು ತೋರಿಸಿದ್ದು ಅದರಲ್ಲಿರುವ ಸಹಿಯನ್ನು ಗುರುತಿಸಿದ್ದು ಆ ದಾಖಲೆಯನ್ನು ನಿಪಿ-2 ಎಂದು ಆ ದಾಖಲೆಯಲ್ಲಿರುವ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯಕ್ಕೆ ಚಾಸಾ-2 ಮತ್ತು 3 ಹಾಜರಿದ್ದರು. ಸುಮಾರು 11.15 ಗಂಟೆಯಿಂದ 12.00 ಗಂಟೆಯವರೆಗೆ ಮಹಜರು ಕ್ರಮ ಜರುಗಿಸಿರುತ್ತಾರೆ

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ ಯವರು ಸಾಕ್ಷಿಯಿಂದ ಇ.ಟಿ.ಎಂ ಅನ್ನು ಗುರುತಿಸಲು ಮುಂದಿನ ಮುಖ್ಯ

ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಅನುಮತಿ ನೀಡಲಾಯಿತು)

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾಧಂ,<br>
ನಂಜನಗೂಡು